ಶ್ರೀ ಎಂ. ಚಂದ್ರಶೇಖರ್.—ನಾನು ಮೊದಲೇ ಹೇಳಿದಂತೆ ಅಲ್ಲಿ ಒಂದೆರಡು ಮನೆಗಳಿಗೆ ಮಾತ್ರ ಕ್ರಮಬದ್ಧವಾದ ಅನುಮತಿ ಕೊಟ್ಟಿದ್ದಾರೆ. ಇನ್ನುಳಿದ ಮನೆಗಳಿಗೆ ಸಂಬಂಧಪಟ್ಟಂತೆ ಪಂಚಾಯಿತಿ ಅವರಾಗಲೀ ಬಿ.ಡಿ.ಎ.ನವರಾಗಲೀ ಯಾವುದೇ ರೀತಿಯ ಅನುಮತಿಯನ್ನು ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಎಷ್ಟು ವರ್ಷಗಳಿಂದ ಈ ಮನೆಗಳು ಅಲ್ಲಿದ್ದವು?

ಶ್ರೀ ಎಂ ಚಂದ್ರಶೇಖರ್.—ಕೆಲವು ಮನೆಗಳನ್ನು ಹೋದ ವರ್ಷ ಕಟ್ಟಿದ್ದು. ಕಳೆದ ನವಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಹೆಚ್ಚಾಗಿ ಅಲ್ಲಿ ಮನೆಗಳಾದವು.

ಶ್ರೀ ಧರ್ಮಸಿಂಗ್.—ಈ ಮನೆಗಳನ್ನು ಕೆಡವಿಹಾಕುವಾಗ ಈ ಮಾನ್ಯ ಮಂತ್ರಿಗಳು ಗುಲ್ಬರ್ಗದಲ್ಲಿ ಪ್ರವಾಸ ಮಾಡುತ್ತಿದ್ದರು. ಈ ಮನೆಗಳನ್ನು ಕೆಡವಿಹಾಕಿದ್ದು ಸರಿ ಎಂದು ಈ ಮಂತ್ರಿಗಳು ಹೇಳಿಕೆ ಕೊಟ್ಟರೆ ಮಾನ್ಯ ರಘುಪತಿಯವರು ಕೆಡವಿಹಾಕಿದ್ದು ತಪ್ಪು ಎಂದು ಹೇಳಿಕೆ ಕೊಟ್ಟಿದ್ದಾರೆ. ಇದರಿಂದ ಇದು ಕಾಂಟ್ರವರ್ಸಿಯಲ್ ಇಷ್ಯೂ ಆಗಿದೆ. ಬೆಂಗಳೂರು ನಗರದಲ್ಲಿ ಅನೇಕ ಕಡೆಗಳಲ್ಲಿ ಅನುಮತಿ ಇಲ್ಲದೆ ಎಷ್ಟೋ ಜನರು ಮನೆಗಳನ್ನು ಕಟ್ಟಿಸಿದ್ದಾರೆ. ಇಲ್ಲಿ ಮನೆಗಳನ್ನು ಕೆಡವಿಹಾಕಿದ ನಂತರ ಜನರು ಪ್ರತಿಭಟನೆ ಮಾಡಿದರೆಂಬ ಕಾರಣದಿಂದ ಬೇರೆ ಕೆಡವಿಹಾಕುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ನಿಮ್ಮ ಕಾಲದಲ್ಲಿ ಆಗಿಲ್ಲವೇ?

ಶ್ರೀ ಧರ್ಮಸಿಂಗ್.—ನಮ್ಮ ಕಾಲದಲ್ಲಿ ಆಗಿಲ್ಲ. ಅನುಮತಿ ಇಲ್ಲದೆ ಇಷ್ಟೊಂದು ಮನೆಗಳು ಆಗಿರುವುದಕ್ಕೆ ಯಾರು ಕಾರಣರು? ಇದರ ಬಗ್ಗೆ ಇಲ್ಲಿ ವಿವರವಾದಂಥ ಚರ್ಚೆ ಆಗಬೇಕಾಗಿದೆ. ಆದ್ದರಿಂದ ತಾವು ಇದಕ್ಕೆ ಪ್ರತ್ಯೇಕವಾದಂಥ ಸಮಯ ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇದಕ್ಕೆ ಪ್ರತ್ಯೇಕವಾದ ಚರ್ಚೆ ಆಗಬೇಕೆಂದು ಹೇಳಿದ್ದಾರೆ. ಇದನ್ನು ಆಲೋಚನೆ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರತ್ಯೇಕವಾದ ಚರ್ಚೆಗೆ ಅವಕಾಶ ಆಗುವುದಿಲ್ಲವೆಂದು ತಾವು ನಮಗೆ ಉತ್ತರ ಬರೆದಿದ್ದೀರಿ.

ಅಧ್ಯಕ್ಷರು.—ಈಗ ಸದನದಲ್ಲಿ ಹೇಳುತ್ತಿದ್ದೇನೆ, ಅವಕಾಶ ಮಾಡಿಕೊಡುತ್ತೇನೆ.

ವಿಷಯ: ರಾಜ್ಯದಲ್ಲಿರುವ ಗ್ರಾಮಲೆಕ್ಕಿಗರ ಸಂಖ್ಯೆ.

ಪ್ರ. 245 (198) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ನಮ್ಮ ರಾಜ್ಯದಲ್ಲಿರುವ ಗ್ರಾಮಲೆಕ್ಕಾಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಅವರಿಗೆ ಪ್ರತಿ ತಿಂಗಳೂ ಕೊಡುತ್ತಿರುವ ಸಂಬಳವೆಷ್ಟು?

ಶ್ರೀ ಎ. ಲಕ್ಷ್ಮೀಸಾಗರ್ (ಕಂದಾಯ ಮಂತ್ರಿಗಳ ಪರವಾಗಿ).—

8,031 ಗ್ರಾಮಲೆಕ್ಕಿಗರು ಈ ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ, ಮಾಹೆಯಾನ 59,57,406·73 ರೂ.ಗಳನ್ನು ಅವರ ಸಂಬಳ, ಸಾರಿಗೆ ಬಗ್ಗೆ ಖರ್ಚು ಮಾಡಲಾಗುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ 8,031 ಜನ ಗ್ರಾಮಲೆಕ್ಕಿಗರಿದ್ದು ಅವರಿಗೆ ಮಾಹೆಯಾನ 59 ಲಕ್ಷದ 57 ಸಾವಿರದ 406·73 ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆದರೆ ಗ್ರಾಮಲೆಕ್ಕಿಗರು ಎಲ್ಲಿರುತ್ತಾರೆಂಬುದು ಯಾರಿಗೂ ಗೊತ್ತಿರುವುದಿಲ್ಲ. ತಹಶೀಲ್ದಾರ್‌ರವರಿಗೂ ಸಹ ಅವರು ಎಲ್ಲಿರುತ್ತಾರೆಂಬುದು ಗೊತ್ತಾಗುವುದಿಲ್ಲ. 1 ತಿಂಗಳಿನಲ್ಲಿ 15 ದಿವಸ ರಜ ಹಾಕಿ ಊರುಗಳಿಗೆ ಹೋಗಿರುತ್ತಾರೆ. ಹಿಂದೆ ಗ್ರಾಮಲೆಕ್ಕಿಗರು ಹಳ್ಳಿಗಳಲ್ಲೇ ಇರಬೇಕೆಂದು ಸರ್ಕಾರೀ ಆದೇಶ ಹೊರಡಿಸಲಾಗಿತ್ತು. ಈಗ ಸರ್ಕಾರ ಗ್ರಾಮಲೆಕ್ಕಿಗರು ಹಳ್ಳಿಯ ರೈತರಿಗೆ ಬೇಗ ಸಿಗುವ ವ್ಯವಸ್ಥೆಯನ್ನು ಮಾಡುತ್ತದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಗ್ರಾಮಲೆಕ್ಕಿಗರು ಹಳ್ಳಿಗಳಲ್ಲಿ ಇರುವುದಿಲ್ಲ ಎನ್ನುವ ದೂರುಗಳು ಬಂದಿವೆ. ಅದರ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಗ್ರಾಮಲೆಕ್ಕಿಗರಿಗೆ ಸುಮಾರು ಏಳೆಂಟು ಹಳ್ಳಿಗಳು ಸೇರಿರುತ್ತವೆ. ಅವರು ಸರಿಯಾದ ರೀತಿಯಲ್ಲಿ ಕೆಲಸಮಾಡುವಂತೆ ನೋಡಿಕೊಳ್ಳಲು ತಹಶೀಲ್ದಾರ್‌ರವರಿಗೆ ಆದೇಶ ಹೊರಡಿಸಿ. ಅವರಿಗಾಗಿ ಸುಮಾರು 60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ, ಅದು ಸಾರ್ಥಕವಾಗುವಂತೆ ಮತ್ತು ಅವರಿಂದ ರೈತರಿಗೆ ಅನುಕೂಲವಾಗುವಂತೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ವ್ಯವಸ್ಥೆ ಮಾಡೋಣ.

MR. SPEAKER.—The question hour is over.